ಮಜರೆ ಹಳ್ಳಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು

551 (765) ಶ್ರೀ ಪಾಟೀಲ್ ಎಂ. ಬಿ. (ಬಬಲೇಶ್ವರ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ವಿಜಾಪುರ ಜಿಲ್ಲೆಯಲ್ಲಿರುವ ಮಜರೆ ಹಳ್ಳಿಗಳು ಎಷ್ಟು? (ಮತಕ್ಷೇತ್ರವಾರು ವಿವರ ನೀಡುವುದು)

ಆ) ಈ ಮಜರೆ ಹಳ್ಳಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–

ಅ) ಬಿಜಾಪುರ ಜಿಲ್ಲೆಯಲಿರುವ ಒಟ್ಟು ಮಜರೆ ಹಳ್ಳಿಗಳು–04 ಅವುಗಳು ಬಸವನಬಾಗೇವಾಡಿ ತಾಲ್ಲೂಕಿನಲ್ಲಿದ್ದು, ಈ ಕೆಳಕಂಡಂತಿರುತ್ತವೆ.

1) ಇಂಗಳೇಶ್ವರ ತಾಂಡಾ (ಬಳ್ಳಾಪುರ)

2) ಅರಳಿಚಂಡಿ

3) ಬಸವನಹಟ್ಟಿ

4) ಜೈನಾಪುರ

ಆ) ಮಜರೆ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಕುರಿತು ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 02 ಭೂದಾಪು 2009, ದಿನಾಂಕ 27–10–2009ರ ಮೇರೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.

ಪ್ರಾಥಮಿಕ ಅಧಿಸೂಚನೆಗೆ ಆಕ್ಷೇಪಣೆಗಳನ್ನು ಆಹ್ವಾನಿಸಿದ್ದು, ಈ ಬಗ್ಗೆ ಪರಿಶೀಲಿಸಿ, ಅಂತಿಮ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು.

ಬರ ಪರಿಹಾರ ಯೋಜನೆಯಡಿ ಬಿಡುಗಡೆಯಾದ ಅನುದಾನ

552 (766) ಶ್ರೀ ಪಾಟೀಲ್ ಎಂ. ಬಿ. (ಬಬಲೇಶ್ವರ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–